**ಅಸಲು ದಾವಾ ನಂಃ 84/2012**

**ಡಿ.ಡಬ್ಲ್ಯೂಃ** -07

(ಉಮೇಶ್. ಎಂ )

**<u>ದಿನಾಂಕಃ 30.10.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಎಸ್ ವಕೀಲರಿಂದಃ</u>**

2. ಈ ದಾವೆಯನ್ನು ವಾದಿ ಸುಬ್ಬರಾಯಪ್ಪ ದಾಖಲಿಸಿರುತ್ತಾರೆ. ಈ ದಾವೆಯನ್ನು ವಾದಿ ಸುಬ್ಬರಾಯಪ್ಪ , ನಾರಾಯಣಸ್ವಾಮಿ ಹಾಗೂ ನನ್ನ ವಿರುದ್ಧ ದಾಖಲಿಸಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿ ವರದಪ್ಪ ಮತ್ತು ಮುನಿಸ್ವಾಮಿ ಯಾರೆಂದು ಗೊತ್ತಿರುವುದಿಲ್ಲ. ಈ ದಾವೆಯನ್ನು ವಿಭಾಗ ಕೋರಿ ದಾಖಲಿಸಿರುತ್ತಾರೆ. ಮುನಿಸ್ವಾಮಿ ಯಾರು ಎಂದು ನನಗೆ ಗೊತ್ತಾ ಎಂಬ ಪ್ರಶ್ನೆ ಗೆ ಸಾಕ್ಷಿಯೂ ವರದಪ್ಪನ ತಾಯಿಯ ಮಾವ ಎಂದು ನುಡಿಯುತ್ತಾರೆ. ನನಗೆ ಮುನಿಸ್ವಾಮಿ ಹೆಣ್ಣು ಮಕ್ಕಳಾದ ಇಬ್ಬರೂ ಲಕ್ಷ್ಮಮ್ಮ ನನಗೆ ಗೊತ್ತು. ಮುನಿಸ್ವಾಮಿ ಅವರ ಹೆಂಡತಿ ಅಕ್ಕಮ್ಮ ಎಂದರೆ ಸರಿ. ಮುನಿಸ್ವಾಮಿ ಮತ್ತು ಅಕ್ಕಮ್ಮ ದಂಪತಿಗಳಿಗೆ ದೊಡ್ಡಲಕ್ಷ್ಮಮ್ಮ ಮತ್ತು ಚಿಕ್ಕ ಲಕ್ಷ್ಮಮ್ಮ ಎಂಬ ಇಬ್ಬರೂ ಹೆಣ್ಣು ಮಕ್ಕಳು ಎಂದರೆ ಸರಿ.

3. ದೊಡ್ಡಲಕ್ಷಮ್ಮ ನ ಗಂಡನ ಹೆಸರು ಯಶವಂತಪುರದ ಬೈರಪ್ಪ ಉರುಫ್ ಕುಡುಮನಳ್ಳಿ ಬೈರಪ್ಪ ಎಂದು ಕರೆಯುತ್ತಿದ್ದರೂ. ದೊಡ್ಡಲಕ್ಷಮ್ಮ ಮತ್ತು ಯಶವಂತಪುರದ ಬೈರಪ್ಪ ಉರುಫ್ ಕುಡುಮನಳ್ಳಿ ಬೈರಪ್ಪ ದಂಪತಿಗಳಿಗೆ ನಂಜಮ್ಮ ಒಬ್ಬಳೇ ಮಗಳೆಂದರೆ ಸರಿಯಲ್ಲ ಸಾಕ್ಷಿಯೂ ಮುಂದುವರೆದು ಮಗಳ ಹೆಸರು ಗೌರಮ್ಮ ಎಂದು ನುಡಿಯುತ್ತಾರೆ. ಆಗಾದರೆ ನನ್ನ ಪ್ರಕಾರವಾಗಿ ಅವರಿಬ್ಬರಿಗೆ ನಂಜಮ್ಮ ಎಂಬ ಮಗಳಿರಲ್ಲವಾ ಎಂಬ ಪ್ರಶ್ನೆ ಸಾಕ್ಷಿಯೂ ಸದರಿ ನಂಜಮ್ಮ ಚಿಕ್ಕಲಕ್ಷ್ಮಮ್ಮ ಮತ್ತು ಅಮ್ಮೆರಳ್ಳಿ ಬೈರಪ್ಪ ಇವರ ಮಗಳು ಎಂದು ನುಡಿಯುತ್ತಾರೆ. ಗೌರಮ್ಮ ಎಂಬುವವರು ಎಲ್ಲಿದ್ದಾರೇ ಎಂದರೆ ಸಾಕ್ಷಿಯೂ ಅವರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದೊಡ್ಡಲಕ್ಷಮ್ಮ ಮತ್ತು ಯಶವಂತಪುರದ ಬೈರಪ್ಪ ಉರುಫ್ ಕುಡುಮನಳ್ಳಿ ಬೈರಪ್ಪ ದಂಪತಿಗಳಿಗೆ ನಂಜಮ್ಮ ಒಬ್ಬಳೇ ಮಗಳು ಇದ್ದ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಪ್ರಕಾರವಾಗಿ ಗೌರಮ್ಮನಿಗೆ ವಾರಸ್ಸು ದಾರರು ಇರುವುದಿಲ್ಲ.

4. ಚಿಕ್ಕಲಕ್ಷ್ಮಮ್ಮ ಮತ್ತು ಅಮ್ಮೆರಳ್ಳಿ ಬೈರಪ್ಪ ದಂಪತಿಗಳಿಗೆ ನಾರಾಯಣಸ್ವಾಮಿ, ಸುಬ್ಬರಾಯಪ್ಪ, ವರದಪ್ಪ ಮತ್ತು ಮುನಿಸ್ವಾಮಿ ಎಂಬ 4 ಜನ ಮಕ್ಕಳು ಎಂದರೆ ಸರಿಯಲ್ಲ. ಆಗಾದರೆ ನನ್ನ ಪ್ರಕಾರವಾಗಿ ಚಿಕ್ಕಲಕ್ಷ್ಮಮ್ಮ ಮತ್ತು ಅಮ್ಮೆರಳ್ಳಿ ಬೈರಪ್ಪ ಇವರಿಗೆ ಯಾರು ಮಕ್ಕಳು ಎಂದರೆ ಸಾಕ್ಷಿಯೂ ಅವರಿಗೆ ಒಬ್ಬಳೇ ಮಗಳು ಅವರೆಂದರೆ ನಂಜಮ್ಮ ಎಂದು ನುಡಿಯುತ್ತಾರೆ. ಆಗಾದರೆ ನನ್ನ ಪ್ರಕಾರವಾಗಿ ವಾದಿಯವರೆಲ್ಲರೂ ಯಾರು ಎಂದರೆ ಸಾಕ್ಷಿಯೂ ಯಂಶವಂತಪುರದ ಬೈರಪ್ಪನ ಹೆಂಡತಿ ದೊಡ್ಡಲಕ್ಷ್ಮಮ್ಮ ತೀರಿಕೊಂಡ ನಂತರ ಯಶವಂತಪುರದ ಬೈರಪ್ಪ ಸುಳೇದೇನಳ್ಳಿ ಮುನಿಯಮ್ಮ ನನ್ನು 2 ನೇ ಮದುವೆಯಾಗಿ ಸದರಿ ಮದುವೆಯಿಂದ ವಾದಿಯವರು ಜನಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ

ಮೇಲಿನ ವಿಚಾರವನ್ನು ವಕೀರಿಗೆ ತಿಳಿಸಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ. ವಾದಿಯವರೆಲ್ಲರೂ ಸುಳೇದೇನಳ್ಳಿ ಮುನಿಯಮ್ಮನ ಮಕ್ಕಳೆಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಮೂಲಪುರುಷ ಮುನಿಸ್ವಾಮಿ ವಂಶವೃಕ್ಷದ ಕುರಿತು ಖುದ್ದಾಗಿ ಮಾಹಿತಿ ಇಲ್ಲದೇ ಇದ್ದರೂ ಕೂಡ ವಾದಿಯವರೆಲ್ಲರೂ ಮುನಿಯಮ್ಮನ ಮಕ್ಕಳೆಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

5. ಮುನಿಸ್ವಾಮಿ ಕುಟುಂಬಕ್ಕೆ ನನ್ನ ತಂದೆ 5 ನೇ ಪ್ರತಿವಾದಿಯಾಗಲಿ ಅಥವಾ 8,9, 11 ಮತ್ತು 10 ನೇ ಪ್ರತಿವಾದಿಯಾದ ನಾನು ಸಂಬಂದಿಸಿರುವುದಿಲ್ಲ ಎಂದರೆ ಸಾಕ್ಷಿಯೂ ನಂಜಮ್ಮನಿಗೆ ಮಕ್ಕಳಿಲ್ಲದಾ ಕಾರಣ ನನ್ನ ತಂದೆಯನ್ನು ಸಾಕಿಕೊಂಡಿದ್ದರೂ ಎಂದು ನುಡಿಯುತ್ತಾರೆ. ನನ್ನ ತಂದೆಯನ್ನು ನಂಜಮ್ಮ ಎಂದಿಗೂ ಸಾಕಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

6. ದಾವಾ ಆಸ್ತಿಗಳೆಲ್ಲವೂ ಮೂಲ ಪುರುಷ ಮುನಿಸ್ವಾಮಿ ಕಡೆಯಿಂದ ಬಂದಿರುತ್ತವೆ ಎಂದರೆ ಸರಿ. ಆದ್ದರಿಂದ ಮೂನಿಸ್ವಾಮಿ ಇಬ್ಬರೂ ಹೆಣ್ಣು ಮಕ್ಕಳಾದ ದೊಡ್ಡಲಕ್ಷ್ಮಮ್ಮ ಮತ್ತು ಚಿಕ್ಕಲಕ್ಷಮ್ಮನಿಗೆ ದಾವಾ ಆಸ್ತಿಗಳಲ್ಲಿ ಸಮಭಾಗದ ಹಕ್ಕು ಇದೆ ಎಂದರೆ ಸರಿ. ಆ ರೀತಿ ಹಕ್ಕು ಇದ್ದರೂ ಕೂಡ ದೊಡ್ಡಲಕ್ಷ್ಮಮ್ಮನ ಮಗಳಾದ ನಂಜಮ್ಮ ಕಾನೂನು ಬಾಹಿರವಾಗಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರೂ ಎಂದರೆ ಸಾಕ್ಷಿಯೂ ಅವರಿಗೆ ಗೌರಮ್ಮ ಎಂಬ ಮಗಳು ಎಂದು ನುಡಿಯುತ್ತಾರೆ. ವಾದಿಯವರು ಹಲವು ಬಾರಿ ನಂಜಮ್ಮನಿಂದ ಭಾಗ ಕೇಳಿದ್ದಾರೆ ಎಂದರೆ ಸಾಕ್ಷಿಯು ನಂಜಮ್ಮನಿಗೆ ಚಿಕ್ಕಲಕ್ಷ್ಮಮ್ಮನ ಭಾಗದ ಆಸ್ತಿಯಲ್ಲಿ ಭಾಗ ಕೊಡಲಾಗಿದೆ ಎಂದು ನುಡಿಯುತ್ತಾರೆ.

7. ನಂಜಮ್ಮ ಕಾನೂನು ಬಾಹಿರವಾಗಿ ದಿ. 17.10.2008 ಹಾಗೂ 19.12.1974 ರಂದು ದಾನಪತ್ರವನ್ನು ಮಾಡಿಕೊಂಡಿದ್ದರೂ ಎಂದರೆ ಸರಿಯಲ್ಲ. ವಾದಿಯವರು ಸುಮಾರು ಬಾರಿ ಭಾಗ ಕೇಳಿ ಕೊಡದೇ ಇದ್ದ ಕಾರಣಕ್ಕೆ ಈ ದಾವೆಯಲ್ಲಿ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿಯಲ್ಲಿರುವಾಗ ನನ್ನ ಹಾಗೂ ನನ್ನ ತಮ್ಮನ ಹೆಸರಿಗೆ ವಿಲ್ ಪತ್ರವನ್ನು ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ವಿಲ್ ಪತ್ರವನ್ನು ಮಾಡಮ ಅಧಿಕಾರ ನಂಜಮ್ಮನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯವರಿಗೆ ಹಾಗೂ 1 ರಿಂದ 3 ನೇ ಪ್ರತಿವಾದಿಯವರಿಗೆ ತಲಾ ಅರ್ಧ ಭಾಗದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

***ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.***

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚುಪಡಿಸಲಾಯಿತು.)**

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.